“ನಮ್ಮ ಪುಟ್ಟಗೌರಿದೊಂದು ಮದಿವಿ ಆಗಿಬಿಟ್ರೆ ಆಯ್ತು ನೋಡವ. ಆ ಶಿವ್ನು ನನ್ನ ಯಾವಾಗ ಕರಕಂಡು ಓದ್ರೂ ನನಗೇನ್ ಚಿಂತಿಲ್ಲ!” ಇದು ಇತ್ತೀಚೆಗಿನ ಅಜ್ಜಿಯರು ತಮಗೆ ಹೆಚ್ಚಿನ ಆಯುಷ್ಯ ನೀಡುವಂತೆ ದೇವರನ್ನು ಬೇಡಿಕೊಳ್ಳುತ್ತಿರುವ ಹೊಸ ವಿಧಾನವಾಗಿದೆ ಅಂತ ಗೆಳೆಯನೊಬ್ಬ ನನ್ನ ಲಕ್ಷ್ಯವನ್ನು ಅತ್ತ ಸೆಳೆದ. ಅದು ಹೇಗೆ ಎಂದು ಆಲೋಚನೆಗಿಟ್ಟುಕೊಂಡಿತು. ನಮ್ಮ ಈ ಕಾಲದ ಧಾರಾವಾಹಿಗಳೇನು ಅಷ್ಟು ಸುಲಭದ ಪೆಟ್ಟಿಗೆ ಮುಗಿಯುವ ಸರಕುಗಳೇ?! ಉಹ್ಞೂಂ. ಕಥಾನಾಯಕಿ ಕಡ್ಡಿಪೆಟ್ಟಿಗೆ ಗೀರಿ ಒಂದು ಸ್ಟೌ ಹಚ್ಚುವುದನ್ನೇ ಒಂದು ಕಂತು ಮಾಡಿ ತೋರಿಸುವಂಥ ತಥಾಕಥಿತ ಕಥಾಕಾಲಕ್ಷೇಪದ ವಿಚಿತ್ರ ಕಾಲಘಟ್ಟವಿದು. ಇಂಥ ಈ ವಿಚಿತ್ರವಾದ ದುರಿತ ಕಾಲದಲ್ಲಿ ಆ ಪುಟ್ಟಗೌರಿಗೆ ಅನುರೂಪ ವರ ದೊರೆತು ಮದುವೆಯಾಗಿ ಸಂಸಾರದ ನೊಗಕ್ಕೆ ಹೆಗಲು ಕೊಡೋ ಹೊತ್ತಿಗೆ ಕನಿಷ್ಠ ಹತ್ತು ವರ್ಷವಾದರೂ ಹಿಡಿದೇ ಹಿಡಿಯುತ್ತದೆ ಎಂಬುದು ಅಂಥವರ ಲೆಕ್ಕಾಚಾರವಾಗಿರಬಹುದು. ಒಂದು ವೇಳೆ ಟಿಆರ್‌ಪಿ ಹೆಚ್ಚಾಗಿ, ಜಾಹೀರಾತುಗಳ ನೂಕುನುಗ್ಗಲು ಕಡಿಮೆಯಾಗದೆ ಉಳಿದರೆ ಮತ್ತೊಂದೈದು ವರ್ಷ ಆಕೆಯ ಮದುವೆ ಮುಂದೆ ಹೋದರೂ ಆಶ್ಚರ್ಯವಿಲ್ಲವಲ್ಲ!

ಟೀವಿ ಎಂಬ ಈ ಪುಟ್ಟ ಮಾಯಾಪೆಟ್ಟಿಗೆ ಆಬಾಲವೃದ್ಧರಾದಿಯಾಗಿ ಮನೆಯ ಅಷ್ಟೂ ಸದಸ್ಯರನ್ನು ತೆಕ್ಕೆಗೆ ತೆಗೆದುಕೊಂಡು, ತನ್ನ ಮೋಹಪಾಶದ ಕಿರುಬೆರಳ ತುದಿಯಲ್ಲಿ ಕುಣಿಸುತ್ತಿರುವುದು ಇಂದು ಎಲ್ಲ ಮನೆಗಳಲ್ಲಿ ಕಾಣಸಿಗುವ ಸಾಮಾನ್ಯ ದೃಶ್ಯವಾಗಿದೆ. ನಾವೇನು ಅಂದ್ಕೊಂಡಿದ್ದೇವೆ ಅಂದರೆ ನಮ್ಮ ಕೈಯಲ್ಲಿ ರಿಮೋಟ್ ಇದೆಯಾದ್ದರಿಂದ ಟೀವಿ ನಾವು ಹೇಳಿದಂತೆ ಕೇಳ್ತಾ ಇದೆ ಅಂತ. ಆದರೆ ವಾಸ್ತವ ಬೇರೆಯೇ ಇದೆ. ಟೀವಿಯು ರಿಮೋಟನ್ನೇ ನಮ್ಮ ಕೈಗೆ ಕೊಟ್ಟಂತೆ ಮಾಡಿ ತನ್ನ ತಾಳಕ್ಕನುಗುಣವಾಗಿ ಮನೆಯವರನ್ನೆಲ್ಲ ಕುಣಿಸುತ್ತಿದೆ! ಅದಕ್ಕಾಗಿಯೇ ಎಷ್ಟೋ ಜನರಿಗೆ ತಮ್ಮ ಮನೆಗಳಲ್ಲಿ ಮದುವೆಯಾಗದೆ

